**All India Radio: Bangalore**
**National Bulletin In Kannada**
**14.10.2026 7.35 am**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**14.10.2026 7.35 am**
**<>><><*><><<>**
ಮುಖ್ಯಾಂಶಗಳು

**೧. ನವದೆಹಲಿಯಲ್ಲಿ ಇಂದಿನಿಂದ 'ಬೃಹತ್ತರ್ ಭಾರತ್; ವಿಶ್ವದಾದ್ಯಂತ ಭಾರತದ ಸಾಂಸ್ಕೃತಿಕ ಸಂಪರ್ಕಗಳು' ಕುರಿತ ಅಂತಾರಾಷ್ಟ್ರೀಯ ಸಮ್ಮೇಳನ**

**೨. ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ದೂರವಾಣಿ ಸಂಭಾಷಣೆ; ಬಾಂಧ್ಯವ್ಯ ಬಲವರ್ಧನೆಗೆ ಸಹಮತ**

**೩. ಮೊದಲ ಬಿಮ್ಸ್‌ಸ್ಟೆಕ್ ಗೃಹ ಸಚಿವರ ಸಭೆ ದೆಹಲಿ ಘೋಷಣೆ ಅಂಗೀಕಾರದೊಂದಿಗೆ ಸಂಪನ್ನ**

**೪. ಬಿಹಾರದಲ್ಲಿ ದೋಣಿ ದುರಂತ; ೧೩ ಮಂದಿ ಸಾವು, ಉಪರಾಷ್ಟ್ರಪತಿ, ಪ್ರಧಾನಿಯವರಿಂದ ಸಂತಾಪ; ಪರಿಹಾರ ಘೋಷಣೆ**

**೫. ಡೆನ್ಮಾರ್ಕ್ ಓಪನ್ ಬ್ಯಾಡ್ಮಿಂಟನ್; ಭಾರತದ ತನ್ವಿ ಶರ್ಮಾ, ಕಿಡಂಬಿ ಶ್ರೀಕಾಂತ್ ಎರಡನೇ ಸುತ್ತು ಪ್ರವೇಶ**

**<>><><*><><<>**

ನವದೆಹಲಿಯಲ್ಲಿ ಇಂದಿನಿಂದ 'ಬೃಹತ್ತರ್ ಭಾರತ್; ವಿಶ್ವದಾದ್ಯಂತ ಭಾರತದ ಸಾಂಸ್ಕೃತಿಕ ಸಂಪರ್ಕಗಳು' ಕುರಿತ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಸಂಸ್ಕೃತಿ ಸಚಿವಾಲಯ ಆಯೋಜಿಸಲಿದೆ. ಕೇಂದ್ರ ಸಂಸ್ಕೃತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಮೂರು ದಿನಗಳ ಈ ಸಮ್ಮೇಳನ, ೫೦ ರಾಷ್ಟ್ರಗಳ ಪ್ರತಿನಿಧಿಗಳು, ರಾಯಭಾರಿಗಳು ಮತ್ತು ವಿದ್ವಾಂಸರನ್ನು ಒಟ್ಟುಗೂಡಿಸಿ ಇಡೀ ಪ್ರಪಂಚದೊಂದಿಗೆ ಭಾರತದ ಐತಿಹಾಸಿಕ ಮತ್ತು ಸಮಕಾಲೀನ ಸಾಂಸ್ಕೃತಿಕ ಸಂಪರ್ಕಗಳ ಕುರಿತು ಚರ್ಚೆ ಮಾಡಲು ವೇದಿಕೆ ಒದಗಿಸಲಿದೆ. ಪ್ರಧಾನಿ ನರೇಂದ್ರ ಮೋದಿ ಈ ಸಂದರ್ಭದಲ್ಲಿ ವಿಶೇಷ ವೀಡಿಯೊ ಸಂದೇಶದ ಮೂಲಕ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಚೀನಾ, ಜಪಾನ್, ಮಂಗೋಲಿಯಾ, ನೇಪಾಳ ಮತ್ತು ಇರಾನ್ ಸೇರಿದಂತೆ ಇತರ ದೇಶಗಳ ಪ್ರತಿನಿಧಿಗಳು ಹಂಚಿಕೆಯ ಸಾಂಸ್ಕೃತಿಕ ಪರಂಪರೆ ಮತ್ತು ನಾಗರಿಕತೆಯ ವಿನಿಮಯದ ಕುರಿತು ವಿಚಾರ ವಿನಿಮಯ ಮಾಡಲಿದ್ದಾರೆ.

**<>><><*><><<>**

ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅವರು ದೂರವಾಣಿ ಮೂಲಕ ಫಲಪ್ರದ ಮಾತುಕತೆ ನಡೆಸಿದ್ದು, ಉಭಯ ದೇಶಗಳ ನಡುವಿನ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲು ಸಮ್ಮತಿಸಿದ್ದಾರೆ. ವ್ಯಾಪಾರ, ಇಂಧನ, ತಂತ್ರಜ್ಞಾನ, ಭದ್ರತೆ ಮತ್ತು ಜನರ ನಡುವಿನ ಬಾಂಧವ್ಯ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಸಕಾರಾತ್ಮಕ ಪ್ರಗತಿಯನ್ನು ಸಾಧಿಸಲು ಒಮ್ಮತ ವ್ಯಕ್ತಪಡಿಸಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ. ಭಾರತ ಮತ್ತು ಕೆನಡಾ ಒಟ್ಟಾಗಿ ಹೆಚ್ಚು ಸ್ಥಿರ ಹಾಗೂ ಸಮೃದ್ಧ ಜಾಗತಿಕ ಸಮಾಜದ ನಿರ್ಮಾಣಕ್ಕೆ ಕೊಡುಗೆ ನೀಡುತ್ತಿವೆ ಎಂದು ಅವರು

ಅಭಿಪ್ರಾಯಪಟ್ಟಿದ್ದಾರೆ. ಈ ನಡುವೆ, ಕೆನಡಾದ ವಿದೇಶಾಂಗ ಸಚಿವೆ ಅನಿತಾ ಆನಂದ್, ಎರಡು ದಿನಗಳ ಅಧಿಕೃತ ಭೇಟಿಗಾಗಿ ನಿನ್ನೆ ಸಂಜೆ ನವದೆಹಲಿಗೆ ಆಗಮಿಸಿದ್ದಾರೆ. ತಮ್ಮ ಭೇಟಿಯ ಭಾಗವಾಗಿ ಅವರು ಇಂದು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಹಾಗೂ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವ ಜಯಂತ್ ಚೌಧರಿ ಅವರನ್ನು ಭೇಟಿ ಮಾಡಿ ದ್ವಿಪಕ್ಷೀಯ ಸಹಕಾರ ಕುರಿತು ಮಾತುಕತೆ ನಡೆಸಲಿದ್ದಾರೆ

<><><*><><<>

ನವದೆಹಲಿಯಲ್ಲಿ ನಡೆದ ಮೊದಲ ಬಿಮ್‌ಸ್ಟೆಕ್ ಗೃಹ ಸಚಿವರ ಸಭೆಯು 'ದೆಹಲಿ ಘೋಷಣೆ'ಯ ಅಂಗೀಕಾರದೊಂದಿಗೆ ನಿನ್ನೆ ಮುಕ್ತಾಯಗೊಂಡಿತು. ಈ ಘೋಷಣೆಯಲ್ಲಿ, ಬಿಮ್‌ಸ್ಟೆಕ್ ರಾಷ್ಟ್ರಗಳು, ಗಡಿಯಾಚೆಗಿನ ಭಯೋತ್ಪಾದನೆ ಸೇರಿದಂತೆ ಭಯೋತ್ಪಾದನೆ ಮತ್ತು ಹಿಂಸಾತ್ಮಕ ಉಗ್ರವಾದದ ಎಲ್ಲಾ ರೂಪಗಳು ಹಾಗೂ ಅಭಿವ್ಯಕ್ತಿಗಳನ್ನು ಬಲವಾಗಿ ಖಂಡಿಸಿವೆ. ವಿಶ್ವಸಂಸ್ಥೆಯ ನಾಗರಿಕ ಸಂಹಿತೆ ಮತ್ತು ಅಂತಾರಾಷ್ಟ್ರೀಯ ಕಾನೂನಿಗೆ ಅನುಗುಣವಾಗಿ, ಭಯೋತ್ಪಾದನೆ ಹಾಗೂ ಅದಕ್ಕೆ ಪೂರಕವಾದ ಹಿಂಸಾತ್ಮಕ ಉಗ್ರವಾದವನ್ನು ತಡೆಗಟ್ಟಲು, ಎದುರಿಸಲು ಮತ್ತು ನಿರ್ಮೂಲನೆ ಮಾಡಲು ಸಮಗ್ರ ಹಾಗೂ ನಿರಂತರ ರೀತಿಯಲ್ಲಿ ಶ್ರಮಿಸುವ ತಮ್ಮ ದೃಢ ನಿಶ್ಚಯವನ್ನು ಈ ರಾಷ್ಟ್ರಗಳು ಪುನರುಚ್ಚರಿಸಿವೆ. ಸಂಪರ್ಕಿತ, ಸುರಕ್ಷಿತ, ಸ್ಥಿತಿಸ್ಥಾಪಕ, ಅಭಿವೃದ್ಧಿ ಹೊಂದಿದ ಮತ್ತು ಸಮೃದ್ಧ ಬಿಮ್‌ಸ್ಟೆಕ್ ಪ್ರದೇಶವನ್ನು ಸಾಕಾರಗೊಳಿಸಲು, ಈ ಸಂಘಟನೆಯ ಅಡಿಯಲ್ಲಿ ಪ್ರಾದೇಶಿಕ ಸಹಕಾರವನ್ನು ಬಲಪಡಿಸಲು ಬದ್ಧರಾಗಿರುವುದಾಗಿ ತಿಳಿಸಿವೆ. ಮಾನವ ಕಳ್ಳಸಾಗಣೆ, ಮಾದಕ ವಸ್ತುಗಳು, ಅಕ್ರಮ ಹಣ ವರ್ಗಾವಣೆ ತಡೆಗಟ್ಟುವಿಕೆ ಕ್ಷೇತ್ರಗಳಲ್ಲಿ ಅಂತಿಮಗೊಳಿಸಲಾದ ಕ್ರಿಯಾ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಹಾಗೂ ಭಯೋತ್ಪಾದನೆ ವಿರುದ್ಧದ ಕ್ರಮಗಳಿಗೆ ಸಹಕಾರ ಕುರಿತ ಉಪ-ಗುಂಪು ಸಿದ್ಧಪಡಿಸಲಿರುವ ಕ್ರಿಯಾ ಯೋಜನೆ ಅಂತಿಮಗೊಳಿಸಲು ದೆಹಲಿ ಘೋಷಣೆ ಕರೆ ನೀಡಿದೆ.

<><><*><><<>

'ಜನ ಸೇವೆಯಿಂದ ದೇಶ ಸೇವೆ' ಎಂಬ ಮಂತ್ರದಡಿ ಜನರ ಏಳಿಗೆಯ ಅಚಲ ಬದ್ಧತೆಯೊಂದಿಗೆ, ಸಾರ್ವಜನಿಕ ಸೇವೆಯ ೨೫ ವರ್ಷಗಳ ಪಯಣವನ್ನು ಪ್ರಧಾನಿ ನರೇಂದ್ರ ಮೋದಿ ಪೂರೈಸಿದ್ದಾರೆ. ಸೇವೆ ಮತ್ತು ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ, ೨೦೪೭ರ ವೇಳೆಗೆ 'ವಿಕಸಿತ ಭಾರತ' ಗುರಿ ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ 'ಪ್ರಧಾನಮಂತ್ರಿ ಉಜ್ವಲ ಯೋಜನೆ' ಕುರಿತ ಒಂದು ವರದಿ ಇಲ್ಲಿದೆ. ಬಡ ಕುಟುಂಬಗಳ ಮಹಿಳೆಯರಿಗೆ ಉತ್ತಮ ಆರೋಗ್ಯ ಹಾಗೂ ಸಮಾನ ಅವಕಾಶ ಕಲ್ಪಿಸುವ ಉದ್ದೇಶದಿಂದ ೨೦೧೬ರಲ್ಲಿ ಆರಂಭವಾದ 'ಪ್ರಧಾನಮಂತ್ರಿ ಉಜ್ವಲ ಯೋಜನೆ'ಯು ದೇಶಾದ್ಯಂತ ದೊಡ್ಡ ಪರಿವರ್ತನೆ ತಂದಿದೆ. ಮನೆಯ ಮಹಿಳೆಯ ಹೆಸರಿನಲ್ಲಿಯೇ ಎಲ್‌ಪಿಜಿ ಸಂಪರ್ಕ ನೀಡುವುದರ ಮೂಲಕ ಕೋಟ್ಯಂತರ ಕುಟುಂಬಗಳನ್ನು ಕಟ್ಟಿಗೆ ಒಲೆಯ ಹೊಗೆಯಿಂದ ಮುಕ್ತಗೊಳಿಸಿದೆ. ೨೦೨೫ರ ಮೇ ತಿಂಗಳ ವೇಳೆಗೆ ದೇಶದ ಬಡ ಮಹಿಳೆಯರಿಗೆ ೧೦.೩ ಕೋಟಿಗೂ ಅಧಿಕ ಉಚಿತ ಎಲ್‌ಪಿಜಿ ಸಂಪರ್ಕಗಳನ್ನು ವಿತರಿಸಲಾಗಿದೆ. ಈ ಯೋಜನೆಯಿಂದ ರಾಷ್ಟ್ರೀಯ ಮಟ್ಟದಲ್ಲಿ ಒಟ್ಟಾರೆ ಎಲ್‌ಪಿಜಿ ಸಂಪರ್ಕಗಳ ಸಂಖ್ಯೆ ೨೦೧೪ರಲ್ಲಿದ್ದ ೧೪.೫೨ ಕೋಟಿಯಿಂದ ೨೦೨೫ರಲ್ಲಿ ೩೩.೩೬ ಕೋಟಿಗೆ ಏರಿಕೆಯಾಗಿದ್ದು, ಬಳಕೆಯೂ ದುಪ್ಪಟ್ಟಾಗಿದೆ. ಅನಿಲ ಮರುಪೂರಣ ಪ್ರಮಾಣ, ೨೦೨೦-೨೨ರಲ್ಲಿ ಪ್ರತಿ ಫಲಾನುಭವಿಗೆ ಸರಾಸರಿ ೩ ಇದ್ದದ್ದು ೨೦೨೩-೨೫ರ ವೇಳೆಗೆ ಸುಮಾರು ೩ಕ್ಕೆ ಏರಿದೆ.

<><><*><><<>

ಬಿಹಾರದ ವೈಶಾಲಿ ಜಿಲ್ಲೆಯ ರಘೋಪುರ್ ದಿಯಾರಾ ಪ್ರದೇಶದಲ್ಲಿ ನಿನ್ನೆ ರಾತ್ರಿ ಗಂಗಾ ನದಿಯಲ್ಲಿ ದೋಣಿಯೊಂದು ಮಗುಚಿ ಬಿದ್ದ ಪರಿಣಾಮ ೧೩ ಮಂದಿ ಮೃತಪಟ್ಟಿದ್ದು, ಆರು ಮಂದಿಯನ್ನು ರಕ್ಷಿಸಲಾಗಿದೆ ಎಂದು ವೈಶಾಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ವರ್ಷಾ ಸಿಂಗ್ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಮೃತಪಟ್ಟವರಲ್ಲಿ ಹೆಚ್ಚಿನವರು ಅಪ್ರಾಪ್ತರಾಗಿದ್ದು, ಇವರು ಔತಣಕೂಟವೊಂದರಲ್ಲಿ ಭಾಗವಹಿಸಲು ದೋಣಿಯಲ್ಲಿ ಪ್ರಯಾಣಿಸುತ್ತಿದ್ದರು. ದೋಣಿಯಲ್ಲಿ ಸುಮಾರು ೧೫ ರಿಂದ ೨೦ ಮಂದಿ ಇದ್ದರು. ಗಾಯಗೊಂಡ ಇತರ ಏಳು ಮಂದಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೇರೆ ಆಸ್ಪತ್ರೆಗೆ ರವಾನಿಸಲಾಗಿದೆ. ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಮತ್ತು ಪ್ರಧಾನಿ ನರೇಂದ್ರ ಮೋದಿ ದೋಣಿ ದುರಂತದಲ್ಲಿ ಸಂಭವಿಸಿದ ಜೀವಹಾನಿಯ ಬಗ್ಗೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ದೋಣಿ ದುರಂತದಲ್ಲಿ ಸಂಭವಿಸಿದ ಜೀವಹಾನಿಯು ಅತ್ಯಂತ ನೋವಿನ ಸಂಗತಿಯಾಗಿದೆ ಎಂದು ಪ್ರಧಾನಿ ಹೇಳಿದ್ದಾರೆ. ಮೃತರ ಕುಟುಂಬದವರಿಗೆ ತಲಾ ೨ ಲಕ್ಷ ರೂಪಾಯಿ ಮತ್ತು ಗಾಯಗೊಂಡವರಿಗೆ ತಲಾ ೫೦ ಸಾವಿರ ರೂಪಾಯಿ ಪರಿಹಾರವನ್ನು ಪ್ರಧಾನಿ ಘೋಷಿಸಿದ್ದಾರೆ. ಘಟನೆ ಕುರಿತು ದುಃಖ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ, ಮೃತರ ಕುಟುಂಬಗಳಿಗೆ ತಲಾ ೪ ಲಕ್ಷ ರೂಪಾಯಿ ಪರಿಹಾರ ನೀಡುವುದಾಗಿ ಘೋಷಿಸಿದ್ದಾರೆ.

**<>><><*><><<>**

ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಮಾತುಕತೆಗಳು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿವೆ ಮತ್ತು ಪ್ರಸ್ತುತ ಒಂದು ಒಪ್ಪಂದವನ್ನು ಅಂತಿಮಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ ಬ್ಲೂಮ್‌ಬರ್ಗ್ ನೂತನ ಆರ್ಥಿಕತೆ ವೇದಿಕೆಯಲ್ಲಿ ಮಾತನಾಡಿದ ಅವರು, ಉಭಯ ದೇಶಗಳ ವ್ಯಾಪಾರ ಸಚಿವರು ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಮತ್ತು ವ್ಯಾಪಾರ ಒಪ್ಪಂದದ ಮಾತುಕತೆಗಳ ಪ್ರಕ್ರಿಯೆಯಲ್ಲಿ ಎರಡೂ ರಾಷ್ಟ್ರಗಳು ಸಾಕಷ್ಟು ಮುಂದುವರಿದಿವೆ ಎಂದು ತಿಳಿಸಿದರು.

**<>><><*><><<>**

ಡೆನ್ಮಾರ್ಕ್ ಓಪನ್ ಬ್ಯಾಡ್ಮಿಂಟನ್ ೨೦೨೬ರ ತಮ್ಮ ಆರಂಭಿಕ ಪಂದ್ಯಗಳಲ್ಲಿ ಭಾರತದ ತನ್ವಿ ಶರ್ಮಾ ಮತ್ತು ಕಿಡಂಬಿ ಶ್ರೀಕಾಂತ್, ಕಠಿಣ ಹೋರಾಟದ ನಂತರ ಜಯಗಳಿಸಿ ಎರಡನೇ ಸುತ್ತಿಗೆ ಪ್ರವೇಶಿಸಿದ್ದಾರೆ. ತನ್ವಿ ರೋಚಕ ಮೂರು ಸೆಟ್‌ಗಳ ಪಂದ್ಯದಲ್ಲಿ ಜಪಾನ್‌ನ ನಾತ್ಸುಕಿ ನಿದಾಯ್‌ರಾ ಅವರನ್ನು ೨-೧ ಅಂತರದಿಂದ ಸೋಲಿಸಿದರು. ಅವರು ಮುಂದಿನ ಪಂದ್ಯದಲ್ಲಿ ಜರ್ಮನಿಯ ಆಟಗಾರ್ತಿ ಇವೋನ್ ಲಿ ಅವರನ್ನು ಎದುರಿಸಲಿದ್ದಾರೆ. ಕಿಡಂಬಿ ಶ್ರೀಕಾಂತ್ ಫ್ರಾನ್ಸ್‌ನ ಆಟಗಾರ ಅರ್ನಾಡ್ ಮೆರ್ಕ್ಲೆ ಅವರನ್ನು ೨-೦ ಅಂತರದಿಂದ ಸೋಲಿಸಿದರು. ೧೬ರ ಘಟ್ಟದ ಪಂದ್ಯದಲ್ಲಿ ಅವರು ಫ್ರಾನ್ಸ್‌ನ ಮತ್ತೊಬ್ಬ ಆಟಗಾರ ಅಲೆಕ್ಸ್ ಲಾನಿಯರ್ ಅವರನ್ನು ಎದುರಿಸಲಿದ್ದಾರೆ. ಪ್ರಶಸ್ತಿ ನಿರೀಕ್ಷೆಗಳನ್ನು ಹೊತ್ತಿದ್ದ ಭಾರತ ಪಿ.ವಿ.ಸಿಂಧು ಮತ್ತು ಲಕ್ಷ್ಯ ಸೇನ್ ಮೊದಲ ಸುತ್ತಿನಲ್ಲೇ ಸೋತು ಟೂರ್ನಿಯಿಂದ ನಿರ್ಗಮಿಸಿದ್ದಾರೆ. ಭಾರತದ ಡಬಲ್ಸ್ ಅಭಿಯಾನವು ಇಂದು ಆರಂಭವಾಗಲಿದ್ದು, ಪುರುಷರ ವಿಭಾಗದಲ್ಲಿ ಸಾತ್ವಿಕ್‌ಸಾಯಿರಾಜ್ ರಂಕಿರೆಡ್ಡಿ-ಚಿರಾಗ್ ಶೆಟ್ಟಿ ಜೋಡಿ, ಮತ್ತು ಮಹಿಳೆಯರ ವಿಭಾಗದಲ್ಲಿ ತ್ರಿಸಾ ಜಾಲಿ-ಗಾಯತ್ರಿ ಗೋಪಿಚಂದ್ ಜೋಡಿ ಕಣಕ್ಕಿಳಿಯುತ್ತಿವೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ ><><<>**